# ಪ್ರಾಥಮಿಕ ಶಿಷ್ಯವೃತ್ತಿ ಪರೀಕ್ಷೆ (PSE) 4 ನೇ ಇಯತ್ತೆ, ಎಪ್ರಿಲ್ 2026

ಆಸನ ಕ್ರಮಾಂಕ- | | | | | | | | | | | |

**0 8 0 1**

ಪೇಪರ್ ಕ್ರ - I

**ಮಾಧ್ಯಮ - ಕನ್ನಡ**

**ಪ್ರಥಮ ಭಾಷೆ ಮತ್ತು ಗಣಿತ**

ಸಂಚ- **A**

ಸಮಯ : 11:00 ರಿಂದ 12:30

ಒಟ್ಟು ಗುಣಗಳು : 150

ಪುಟಗಳು : 32

***ಪ್ರಶ್ನೆ ಪತ್ರಿಕೆ ಬಿಡಿಸುವುದಕ್ಕಿಂತ ಮುಂಚೆ ಕೆಳಗಿನ ಸೂಚನೆಗಳು ಎಚ್ಚರಿಕೆಯಿಂದ ಓದಿರಿ.***

(1) ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ವಿಭಾಗಗಳಿವೆ. ವಿಭಾಗ **I** ರಲ್ಲಿ ಪ್ರಥಮ ಭಾಷೆಯ **1**ರಿಂದ **25** ಪ್ರಶ್ನೆಗಳಿವೆ ಮತ್ತು ವಿಭಾಗ **II** ರಲ್ಲಿ ಗಣಿತದ **26** ರಿಂದ **75** ಪ್ರಶ್ನೆಗಳಿವೆ. ಹೀಗೆ **75** ಪ್ರಶ್ನೆಗಳು ಇದ್ದು ಎಲ್ಲ ಪ್ರಶ್ನೆಗಳು ಬಿಡಿಸುವುದು ಅವಶ್ಯಕವಾಗಿದೆ.

(2) ಪ್ರತಿಯೊಂದು ಪ್ರಶ್ನೆಗೆ **2** ಗುಣಗಳಿವೆ.

(3) ಪ್ರಶ್ನೆ ಪತ್ರಿಕೆ ಬಿಡಿಸಲು ಒಟ್ಟು **90** ನಿಮಿಷಗಳ ಕಾಲಾವಧಿ ಕೊಡಲಾಗಿದೆ.

(4) ಉತ್ತರಗಳನ್ನು ನೊಂದಾಯಿಸುವ ಸಲುವಾಗಿ ಸ್ವತಂತ್ರ ಉತ್ತರ ಪತ್ರಿಕೆ ಕೊಡಲಾಗಿದೆ. ಪ್ರತಿಯೊಂದು ಪ್ರಶ್ನೆ ಕ್ರಮಾಂಕದ ಮುಂದೆ ನಾಲ್ಕು ಪರ್ಯಾಯವಿರುವ ವರ್ತುಳಗಳನ್ನು ಕೊಡಲಾಗಿದೆ. ಅದರಲ್ಲಿ ಯೋಗ್ಯ ಉತ್ತರವಿರುವ ಪರ್ಯಾಯ ಕ್ರಮಾಂಕದ ವರ್ತುಳವನ್ನು ಉದಾಹರಣೆಯಲ್ಲಿ ತೋರಿಸಿದಂತೆ ನೊಂದಾಯಿಸಿರಿ. ಉದಾ – ಪ್ರಶ್ನೆ ಕ್ರಮಾಂಕ 6ರ ಉತ್ತರ 2 ಆದರೆ ಕೆಳಗೆ ತೋರಿಸಿದಂತೆ ವೃತ್ತವನ್ನು ಪೂರ್ಣವಾಗಿ ತುಂಬಿರಿ.

ಉದಾ. ಪ್ರಶ್ನೆ ಕ್ರ. **6** - ① ● ③ ④

(5) ಕೆಳಗಿನಂತೆ ನೊಂದಾಯಿಸಿದ ಉತ್ತರಗಳ ಬಗ್ಗೆ ವಿಚಾರ ಮಾಡಲಾಗುವದಿಲ್ಲ.

① ② ⊙ ④

(6) ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ವರ್ತುಳಗಳಲ್ಲಿ ನೊಂದಾಯಿಸಿದ ಉತ್ತರಗಳು, ತಿದ್ದುಪಡಿ ಮಾಡಿ ನೊಂದಾಯಿಸಿದ ಉತ್ತರಗಳು ಗಮನಕ್ಕೆ ತೆಗೆದುಕೊಳ್ಳಲಾಗುವದಿಲ್ಲ.

(7) ಒಮ್ಮೆ ನೊಂದಾಯಿಸಿದ ಉತ್ತರ ಬದಲಾಯಿಸಲು ಬರುವುದಿಲ್ಲ.

(8) ಪರ್ಯಾಯದ ಉತ್ತರ ಕ್ರಮಾಂಕಗಳನ್ನು ಕೇವಲ ಕಪ್ಪು ಅಥವಾ ನೀಲಿ ಬಾಲ್ ಪೆನ್ನಿನಿಂದ ನೊಂದಾಯಿಸಬೇಕು. ಪೆನ್ಸಿಲಿನಿಂದ ನೊಂದಾಯಿಸಿದ ಉತ್ತರಗಳ ಬಗ್ಗೆ ವಿಚಾರ ಮಾಡಲಾಗುವುದಿಲ್ಲ.

(9) ಪ್ರಶ್ನೆ ಪತ್ರಿಕೆಯ ಪ್ರತಿಯೊಂದು ಪುಟದ ಕೆಳಗೆ ಮತ್ತು ಕೊನೆಯ ಪುಟದ ಮೇಲೆ ಕಚ್ಚಾ ಕೆಲಸಕ್ಕಾಗಿ ಖಾಲಿ ಸ್ಥಳವನ್ನು ಬಿಡಲಾಗಿದೆ ಅಲ್ಲಿಯೇ ಕಚ್ಚಾ ಕಾರ್ಯ ಮಾಡಬೇಕು.

(10) ಪರೀಕ್ಷೆಗೆ ಮರ್ಯಾದಿತ ವೇಳೆ ಇರುವುದರಿಂದ ಒಂದು ಪ್ರಶ್ನೆಯ ಉತ್ತರ ನಿಮಗೆ ಬರದಿದ್ದರೆ, ಮುಂದಿನ ಪ್ರಶ್ನೆ ಬಿಡಿಸಿರಿ. ಕೊನೆಗೆ ವೇಳೆ ಇದ್ದರೆ ಉಳಿದ ಪ್ರಶ್ನೆಗಳ ಬಗ್ಗೆ ಪುನಃ ಪ್ರಯತ್ನ ಮಾಡಿರಿ.

(11) ಯಾವುದೇ ಪ್ರಶ್ನೆಯಲ್ಲಿ ತಪ್ಪು/ ದೋಷಗಳಿದ್ದರೆ ಅದರ ಬಗ್ಗೆ ಪರ್ಯವೇಕ್ಷಕ ಅಥವಾ ಪರೀಕ್ಷೆ ಕೇಂದ್ರ ಸಂಚಾಲಕರ ಕಡೆ ವಿಚಾರಣೆ ಮಾಡಬಾರದು.

(12) ಪ್ರಶ್ನೆಯಲ್ಲಿಯ ಯಾವುದೇ ದೋಷ/ತಪ್ಪು/ ಆಕ್ಷೇಪಣೆ ಬಗ್ಗೆ ನಿಮ್ಮ ಲಿಖಿತ ನಿವೇದನೆಯನ್ನು ಶಾಲೆಯವರು ಅಥವಾ ಪಾಲಕರು ಗಟಶಿಕ್ಷಣಾಧಿಕಾರಿ ಅಥವಾ ಶಿಕ್ಷಣಾಧಿಕಾರಿಯವರಿಗೆ ಕಳುಹಿಸಬಾರದು. ಆಯಾ ಶಾಲೆಯ ಲೌಗಿನ್ ನಿಂದ ಆನ್‌ಲೈನ್ ನೊಂದಾಯಿಸಬೇಕು.

(13) ದೋಷ/ತಪ್ಪು/ಆಕ್ಷೇಪಣೆಗಳ ಬಗ್ಗೆ ನಿವೇದನೆಯನ್ನು ಆನ್‌ಲೈನ್ ಪದ್ಧತಿಯಿಂದ ಕಳಿಸುವ ಅವಧಿಯು ಪರೀಕ್ಷಾ ಪರಿಷದ ಸಂಕೇತಸ್ಥಳದ ಮೇಲೆ ಮಧ್ಯಂತರ (ತಾತ್ಕಾಲಿಕ) ಉತ್ತರ ಪತ್ರಿಕೆ ಪ್ರಕಟವಾದಾಗಿನಿಂದ **10** (ಹತ್ತು) ದಿನಗಳ ವರೆಗೆ ಇರುವದು.

(14) ಮುದ್ರಣ ದೋಷ ಅಥವಾ ಅನ್ಯ ಕಾರಣಗಳಿಂದ ಪ್ರಶ್ನೆ ತಪ್ಪು ಎಂದು ಕಂಡು ಬಂದರೆ ತಜ್ಞ ಸಮಿತಿಯ ಅಭಿಪ್ರಾಯಕ್ಕೆ ಅನುಸಾರವಾಗಿ ಅದನ್ನು ರದ್ದು ಮಾಡಲಾಗುವುದು.

(15) ಮೂಲ ಕನ್ನಡ ಮಾಧ್ಯಮದ ಜೊತೆಗೆ ಇಂಗ್ಲೀಷ್ ಭಾಷೆಯಲ್ಲಿ ಪ್ರಶ್ನೆ ಪತ್ರಿಕೆ ಕೊಡಲಾಗಿದೆ, ಮೂಲ ಕನ್ನಡ ಮಾಧ್ಯಮದಲ್ಲಿಯ ಸಂದಿಗ್ಧ ಪ್ರಶ್ನೆಯ ಬಗ್ಗೆ ಇಂಗ್ಲೀಷ್ ಪ್ರಶ್ನೆ ನೋಡಿರಿ.

## ವಿಭಾಗ - I

### ಕನ್ನಡ

**01.** 'ಗುಟ್ಟಾಗಿ ಸುದ್ದಿ ಮುಟ್ಟಿಸುವವ' ಈ ಶಬ್ದ ಸಮೂಹಕ್ಕೆ ಸೂಕ್ತವಾದ ಶಬ್ದ ಗುರುತಿಸಿರಿ.
(1) ಗುಪ್ತಚಾರ
(2) ಪತ್ರಕಾರ
(3) ಪೋಸ್ಟಮನ್
(4) ಸೇವಕ

**02.** ಬರಿದಾದ ಚೌಕಟ್ಟಿನಲ್ಲಿ ಯೋಗ್ಯ ಅಕ್ಷರವನ್ನು ಉಪಯೋಗಿಸಿ ಪದಬಂಧವನ್ನು ಪೂರ್ಣ ಮಾಡಿರಿ.

| | | | |
|---|---|---|---|
| | ವೈ | | |
| ಸ | | ಧಾ | ನ |
| | ನಿ | | |
| | ಕ | | |

(1) ಮಾ (2) ದಾ
(3) ಗಾ (4) ರಾ

**03.** ಹಾಸಿಗೆ ಇದ್ದಷ್ಟು ಕಾಲು ಚಾಚು. ಈ ಗಾದೆಗೆ ಯಾವ ಪರ್ಯಾಯ ಯೋಗ್ಯವಲ್ಲ ?
(1) ಆದಾಯವಿರುವಷ್ಟೇ ವೆಚ್ಚ ಮಾಡಬೇಕು (2) ಸಾಲಮಾಡಿ ತುಪ್ಪ ತಿನ್ನಬೇಕು
(3) ಸಾಲದ ಶೂಲಕ್ಕೆ ಸಿಲುಕಬಾರದು (4) ಶಕ್ತಿ – ಸಾಮರ್ಥ್ಯವನ್ನರಿತು ಬದುಕಬೇಕು

**04.** ಕೆಳಗಿನವುಗಳಲ್ಲಿ ಎರಡು ಭಿನ್ನ – ಭಿನ್ನ ಅರ್ಥ ಇರುವ ಶಬ್ದ ಯಾವುದು ?
(1) ಕಾಗೆ (2) ನೀರು
(3) ಹಾಲು (4) ಜಿಗಿ

**05.** 'ಕೈಲಾಸವಾಸಿಯಾಗು' ಈ ಪಡೆನುಡಿಯ ಅರ್ಥವನ್ನು ಪರ್ಯಾಯಗಳಿಂದ ಗುರುತಿಸಿರಿ.
(1) ಸ್ವರ್ಗಸ್ಥನಾಗು (2) ಹೆಸರು ಗಳಿಸು
(3) ಪ್ರವಾಸಮಾಡು (4) ಕಳೆದುಕೊಳ್ಳು

**ಕೇವಲ ಕಚ್ಚಾ ಕೆಲಸಕ್ಕಾಗಿ**

**06.** ಕೆಳಗಿನವುಗಳಲ್ಲಿ ಅನುನಾಸಿಕ ಯಾವುದು ?

(1) ಕ (2) ತ

(3) ನ (4) ಪ

**07.** ಸುಂದರ, ಮಂದಿರ, ಚಂದಿರ, ಇಂಚರ. ಈ ಶಬ್ದಗಳನ್ನು ವರ್ಣಮಾಲೆಯ ಅನುಕ್ರಮವಾಗಿ ಬರೆದಾಗ ಕೊನೆಯಲ್ಲಿ ಬರುವ ಶಬ್ದ ಯಾವುದು ?

(1) ಚಂದಿರ (2) ಸುಂದರ

(3) ಮಂದಿರ (4) ಇಂಚರ

**08.** ಕೆಳಗಿನ ಪರ್ಯಾಯಗಳಲ್ಲಿ ಶುದ್ಧವಾದ ಶಬ್ದವನ್ನು ಗುರುತಿಸಿರಿ.

(1) ಕಿರ್ತಿವಂತ

(2) ಕಿತ್ರಿವಂತ

(3) ಕೀರ್ತಿವಂತ

(4) ಕೀರ್ತೀವಂತ

**09.** ಕೆಳಗಿನ ಲಿಂಗ ಬದಲಿಸಿದ ಜೋಡಿಗಳಲ್ಲಿ ಯಾವುದು ತಪ್ಪಾಗಿದೆ ?

(1) ಮಿತ್ರ – ಶತ್ರು

(2) ಹುಡುಗಿ – ಹುಡುಗ

(3) ಗೆಳೆಯ – ಗೆಳತಿ

(4) ತಂದೆ – ತಾಯಿ

**10.** ಭರಮಪ್ಪ ಮಲ್ಲಮ್ಮ ದಂಪತಿಗಳು ಬಡತನದಲ್ಲಿಯೂ ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ. ಈ ವಾಕ್ಯದ ಕಾಲ ಗುರುತಿಸಿರಿ.

(1) ಭವಿಷ್ಯತ್‌ಕಾಲ

(2) ಭೂತಕಾಲ

(3) ವರ್ತಮಾನಕಾಲ

(4) ಹೇಳಲು ಬರುವುದಿಲ್ಲ

**ಕೇವಲ ಕಚ್ಚಾ ಕೆಲಸಕ್ಕಾಗಿ**

11. ಹೌದು, ಅದೆಷ್ಟು ಚಂದ ! ಮಾಲತಿ ಅದರಲ್ಲಿ ಎಷ್ಟು ಬಣ್ಣಗಳಿವೆ ? ಈ ವಾಕ್ಯದಲ್ಲಿ ಕೆಳಗಿನ ಪರ್ಯಾಯಗಳ ಪೈಕಿ ಯಾವ ವಿರಾಮ ಚಿಹ್ನೆ ಬಂದಿಲ್ಲ ?

(1) ಪ್ರಶ್ನಾರ್ಥಕ

(2) ಪೂರ್ಣವಿರಾಮ

(3) ಉದ್ಗಾರವಾಚಕ

(4) ಅಲ್ಪವಿರಾಮ

12. ರೈತನು ಹೊಲದಲ್ಲಿ ರಾಶಿಯನ್ನು ಮಾಡಿದನು. ಈ ವಾಕ್ಯದಲ್ಲಿ ನಾಮಪದ ಯಾವುದು ?

(1) ಮಾಡಿದನು

(2) ಹೊಲದಲ್ಲಿ

(3) ರೈತನು

(4) ಯಾವುದೂ ಇಲ್ಲ

13. ಕೊಟ್ಟ ಪರ್ಯಾಯದಲ್ಲಿಯ ಶಬ್ದಗಳು ಬಹುವಚನವಾಗಲು 'ಗಳು' ಪ್ರತ್ಯಯ ಜೋಡಿಸಿದಾಗ ಯಾವ ಶಬ್ದ ತಪ್ಪಾಗುವುದು ?

(1) ಪುಸ್ತಕ

(2) ಮೇಜು

(3) ಪೆನ್ನು

(4) ಗೆಳೆಯ

14. ಕೆಳಗಿನ ಪರ್ಯಾಯಗಳಲ್ಲಿ ನಮ್ಮ ರಾಷ್ಟ್ರೀಯ ಹಬ್ಬ ಯಾವುದು ?

(1) ದೀಪಾವಳಿ

(2) ಗಣರಾಜ್ಯೋತ್ಸವ

(3) ರಕ್ಷಾಬಂಧನ

(4) ಮಕ್ಕಳ ದಿನಾಚರಣೆ

**ಕೇವಲ ಕಚ್ಚಾ ಕೆಲಸಕ್ಕಾಗಿ**

**ಪ್ರಶ್ನೆ ಕ್ರ. 15 ರಿಂದ 17 ರ ಸಲುವಾಗಿ ಸೂಚನೆ –** ಕೆಳಗಿನ ಗದ್ಯಭಾಗವನ್ನು ಓದಿರಿ. ಅದರ ಕೆಳಗೆ ಕೇಳಲಾಗಿರುವ ಪ್ರಶ್ನೆಗಳ ಉತ್ತರಗಳನ್ನು ಪರ್ಯಾಯಗಳಿಂದ ಆರಿಸಿರಿ.

ಕಲಕತ್ತ (ಈಗ ಕೊಲ್ಕತ್ತ) ಭಾರತದ ದೊಡ್ಡ ನಗರಗಳಲ್ಲಿ ಒಂದು. ಅಲ್ಲಿ ಹಿಂದೆ ವಿಶ್ವನಾಥದತ್ತ ಎಂಬ ಪ್ರಸಿದ್ಧ ವಕೀಲರಿದ್ದರು. ಅವರ ಹೆಂಡತಿಯ ಹೆಸರು ಭುವನೇಶ್ವರಿದೇವಿ. ಈ ದಂಪತಿಗಳ ಮುದ್ದಿನ ಮಗುವಾಗಿ ೧೮೬೩ ನೆಯ ಇಸ್ವಿ ಜನವರಿ ೧೨ ನೆಯ ತಾರೀಖಿನ ದಿನ ವಿವೇಕಾನಂದರು ಜನಿಸಿದರು. ಇವರ ಮೂಲ ಹೆಸರು ನರೇಂದ್ರ. ಸೂರ್ಯೋದಯ ಸಮಯದಲ್ಲಿ ಜನಿಸಿದ ಇವರು ಜನರಿಗೆ ವಿವೇಕವನ್ನೂ, ಆನಂದವನ್ನೂ ಕೊಟ್ಟರು. ಇದರಿಂದಲೇ ಇವರು ವಿವೇಕಾನಂದರೆಂದು ಹೆಸರಿಸಲ್ಪಟ್ಟರು.

ಮಕ್ಕಳಿಗೆ ತಾಯಿಯೇ ಮೊದಲಗುರು. ನರೇಂದ್ರನಿಗೆ ಭುವನೇಶ್ವರಿದೇವಿಯೇ ಮೊದಲು ಅಕ್ಷರಗಳನ್ನು ಹೇಳಿಕೊಟ್ಟಳು. ನಂತರ ಉಪಾಧ್ಯಾಯರನ್ನು ನೇಮಿಸಿದರು. ಉಪಾಧ್ಯಾಯರು ಹೇಳಿದುದನ್ನೆಲ್ಲಾ ನರೇಂದ್ರನು ಸ್ವಲ್ಪವೂ ತಪ್ಪದೆ ಮರಳಿ ಹೇಳುತ್ತಿದ್ದನು. ಈ ಅದ್ಭುತ ಜಾಣ್ಣೆಯನ್ನು ಕಂಡು ಉಪಾಧ್ಯಾಯರು ಇವನು ತುಂಬಾ ವಿದ್ಯಾವಂತನಾಗುತ್ತಾನೆ ಎಂದು ತಿಳಿಸಿದರು. ನರೇಂದ್ರನು ಏಳು ವರ್ಷದವನಿದ್ದಾಗಲೇ ಸಂಸ್ಕೃತ ಮತ್ತು ವ್ಯಾಕರಣ ಪುಸ್ತಕದ ಪಾಠಗಳನ್ನೆಲ್ಲ ಬಲ್ಲವನಾಗಿದ್ದನು. ರಾಮಾಯಣ, ಮಹಾಭಾರತದ ಶ್ಲೋಕಗಳನ್ನು ಚೆನ್ನಾಗಿ ಹೇಳುತ್ತಿದ್ದನು.

**15.** ವಿವೇಕಾನಂದರ ಮೊದಲ ಗುರು ಯಾರು ?

(1) ವಿಶ್ವನಾಥದತ್ತ
(2) ನರೇಂದ್ರ
(3) ಭುವನೇಶ್ವರಿದೇವಿ
(4) ಉಪಾಧ್ಯಾಯರು

**16.** ವಿವೇಕಾನಂದರ ಮೂಲ ಹೆಸರೇನು ?

(1) ವಿವೇಕ
(2) ನರೇಂದ್ರ
(3) ಆನಂದ
(4) ವಿಶ್ವನಾಥ

**17.** ವಿವೇಕಾನಂದರು ಯಾವ ಸಮಯದಲ್ಲಿ ಜನಿಸಿದರೆಂದು ಹೇಳಲಾಗಿದೆ ?

(1) ಶುಭ ಸಮಯದಲ್ಲಿ
(2) ಸಂತೋಷದ ಸಮಯದಲ್ಲಿ
(3) ಸೂರ್ಯಾಸ್ತದ ಸಮಯದಲ್ಲಿ
(4) ಸೂರ್ಯೋದಯ ಸಮಯದಲ್ಲಿ

**ಕೇವಲ ಕಚ್ಚಾ ಕೆಲಸಕ್ಕಾಗಿ**

**ಪ್ರಶ್ನೆ ಕ್ರ. 18 ರಿಂದ 20 ರ ಸಲುವಾಗಿ ಸೂಚನೆ –** ಕೆಳಗಿನ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೇಳಲಾಗಿರುವ ಪ್ರಶ್ನೆಗಳ ಉತ್ತರಗಳನ್ನು ಪರ್ಯಾಯಗಳಿಂದ ಆರಿಸಿರಿ.

ರವಿಯದೊ ಹೊರಟನು ಪಡುವಣಕೆ
ತಾಯಿಯ ಮನೆಯನು ಸೇರಲಿಕೆ
ಸಂಜೆಯ ಹೊತ್ತಿನ ಹೂಬಿಸಿಲು
ಕಣ್ಣಿಗೆ ಹಿಗ್ಗಿನ ಅಂದದ ಹೊನಲು
ಬಿಳಿತೆರೆ ಮೋಡದ ಅಂಚಿನಲಿ
ಹನಿಮಳೆ ಬೀಳುವ ಹೊತ್ತಿನಲಿ
ತುಂತುರು ಹನಿಗಳು ಬೀಳುತ್ತಿವೆ
ಕಾಮನ ಬಿಲ್ಲನು ಮೂಡಿಸಿವೆ
ಕಾಮನ ಬಿಲ್ಲನು ನೋಡಲ್ಲಿ
ಮಣಿದಿಹ ಬಿಲ್ಲದು ಮುಗಿಲಲ್ಲಿ
ಕಿತ್ತಳೆ ಕೇಸರಿ ಹಳದಿ ಕೆಂಪು
ನೀಲಿ ಕಂದು ನೇರಿಳೆ ತಂಪು
ನೆಲಕೂ ಮುಗಿಲಿಗೂ ಮುಟಿಹುದು
ಕಣ್ಣಿಗೆ ಹಬ್ಬವ ತಂದಿಹುದು

**18.** ರವಿಯು ಯಾರ ಮನೆ ಸೇರಲು ಹೊರಟಿದ್ದಾನೆ ?
(1) ಮುಗಿಲಿನ (2) ಕಾಮನಬಿಲ್ಲಿನ
(3) ನೆಲದ (4) ತಾಯಿಯ

**19.** ರವಿಯು ಯಾವ ದಿಕ್ಕಿಗೆ ಹೊರಟಿದ್ದಾನೆ ?
(1) ಪಶ್ಚಿಮ (2) ಪೂರ್ವ
(3) ದಕ್ಷಿಣ (4) ಉತ್ತರ

**20.** ಯಾವುದು ಕಣ್ಣಿಗೆ ಹಬ್ಬವನ್ನು ತಂದಿದೆ ?
(1) ಬಿಳಿತೆರೆ ಮೋಡ (2) ಮಳೆಹನಿ
(3) ಕಾಮನಬಿಲ್ಲು (4) ಸೂರ್ಯ

**ಕೇವಲ ಕಚ್ಚಾ ಕೆಲಸಕ್ಕಾಗಿ**

21. ಕೆಳಗಿನ ಸಮಾನಾರ್ಥಕ ಶಬ್ದಗಳಲ್ಲಿ ತಪ್ಪಾದ ಜೋಡಿ ಯಾವುದು ?

(1) ಅಪಾಯ – ತೊಂದರೆ (2) ಆಯಾಸ – ದಣಿವು

(3) ಪ್ರಶಂಶಿನು – ಹೊಗಳು (4) ಕರುಣೆ – ಸ್ಮರಣೆ

22. 'ಸಂತೋಷ' ಈ ಶಬ್ದದ ವಿರುದ್ಧಾರ್ಥಕ ಶಬ್ದ ಯಾವುದು ?

(1) ದುಃಖ (2) ನೆಮ್ಮದಿ

(3) ಮುದ (4) ಶಾಂತಿ

23. ಕೆಳಗಿನವುಗಳಲ್ಲಿ ತಪ್ಪಾದ ಜೋಡಿ ಗುರುತಿಸಿರಿ.

(1) ಕುರಿ – ಹಿಂಡು (2) ಗುಡಿ – ಗುಂಡಾರ

(3) ದ್ರಾಕ್ಷೆ – ಗೊಂಚಲು (4) ಬಾಳೆ – ಗೊನೆ

24. 'ಕೆ, ನಂ, ಥ, ಬಿ, ಮೂ' ಈ ಅಕ್ಷರಗಳನ್ನು ಒಂದೊಂದೇ ಸಲ ಉಪಯೋಗಿಸಿ ತಯಾರಿಸಿದ ಅರ್ಥಪೂರ್ಣ ಶಬ್ದದ ಕೊನೆಯ ಅಕ್ಷರ ಯಾವುದು ?

(1) ಮೂ

(2) ಬಿ

(3) ಕೆ

(4) ಥ

25. 'ಕೆರೆ' ಈ ಪದದ ಜೋಡಿ ಶಬ್ದ ಗುರುತಿಸಿರಿ.

(1) ಮರೆ (2) ನೀರು


(3) ಹೊರೆ (4) ಕಟ್ಟೆ


**ಕೇವಲ ಕಚ್ಚಾ ಕೆಲಸಕ್ಕಾಗಿ**


**SECTION - II**


## MATHEMATICS

**26.** Complete the picture pattern given below.

 ?

(1) 

(2) 

(3) 

(4) 

**27.** If Independence Day is on Friday then which days will occur 5 times, in the same month?

(1) Saturday, Sunday, Monday
(2) Monday, Tuesday, Wednesday
(3) Tuesday, Wednesday, Thursday
(4) Friday, Saturday, Sunday

**28.** Which will be the second last number, if the following numbers are written in descending order?

40405, 45005, 45050, 40504

(1) 40504  (2) 45005  (3) 40405  (4) 45050

**29.** Salma needs two and half meter of fabric to stitch a Kurti and her two sisters need one and half meter of fabric each. The shopkeeper cut the required fabric for the three of them from a fabric roll of 10 meters and gave them. How much of the fabric is remaining in the roll?


(1) 5.5 meters  (2) 4.5 meters  (3) 7.5 meters  (4) 7 meters


**SPACE FOR ROUGH WORK**


## ವಿಭಾಗ - II


### ಗಣಿತ

**26.** ಕೆಳಗಿನ ಆಕೃತಿಬಂಧವನ್ನು ಪೂರ್ಣಗೊಳಿಸಿರಿ



(1) 

(2) 

(3) 

(4) 

**27.** ಸ್ವಾತಂತ್ರ್ಯ ದಿನದಂದು ಶುಕ್ರವಾರವಿದ್ದರೆ ಆ ತಿಂಗಳಿನಲ್ಲಿ ಯಾವ ವಾರವು ಐದು ಸಲ ಬರುತ್ತದೆ ?

(1) ಶನಿವಾರ, ರವಿವಾರ, ಸೋಮವಾರ

(2) ಸೋಮವಾರ, ಮಂಗಳವಾರ, ಬುಧವಾರ

(3) ಮಂಗಳವಾರ, ಬುಧವಾರ, ಗುರುವಾರ

(4) ಶುಕ್ರವಾರ, ಶನಿವಾರ, ರವಿವಾರ

**28.** ಕೆಳಗಿನ ಸಂಖ್ಯೆಗಳನ್ನು ಇಳಿಕೆಯ ಕ್ರಮದಲ್ಲಿ ಬರೆದಾಗ ಕೊನೆಯಿಂದ ಬರುವ ಎರಡನೆಯ ಸಂಖ್ಯೆ ಯಾವುದು?

೪೦೪೦೫, ೪೫೦೦೫, ೪೫೦೫೦, ೪೦೫೦೪

(1) ೪೦೫೦೪ (2) ೪೫೦೦೫ (3) ೪೦೪೦೫ (4) ೪೫೦೫೦

**29.** ಕುರ್ತಾ ಹೊಲಿಯುವುದಕ್ಕಾಗಿ ಸಲಮಾಳಿಗೆ ಎರಡುವರೆ ಮೀಟರ್ ಹಾಗೂ ಅವಳ ಇಬ್ಬರು ತಂಗಿಯರಿಗೆ ಪ್ರತಿಯೊಬ್ಬಳಿಗೆ ಒಂದು ವರೆ ಮೀಟರ್ ಬಟ್ಟೆ ಬೇಕಾಗುವುದು. ೧೦ ಮೀಟರಿನ ತಾಗಾದಿಂದ ಅಂಗಡಿಕಾರನು ಮೂವರಿಗಾಗಿ ಬಟ್ಟೆಯನ್ನು ಕತ್ತರಿಸಿ ಕೊಟ್ಟನು ಹಾಗಾದರೆ ತಾಗಾದಲ್ಲಿ ಎಷ್ಟು ಬಟ್ಟೆ ಉಳಿಯಬಹುದು ?

(1) ಐದುವರೆ ಮೀಟರ್ (2) ನಾಲ್ಕುವರೆ ಮೀಟರ್

(3) ಏಳುವರೆ ಮೀಟರ್ (4) ಏಳು ಮೀಟರ್

**ಕೇವಲ ಕಚ್ಚಾ ಕೆಲಸಕ್ಕಾಗಿ**

**30.** If the fractions $\frac{5}{3}, \frac{8}{3}, \frac{7}{3}, \frac{1}{3}, \frac{4}{3}$ are arranged in descending order, then which of the following fractions will occur serially first and last?

(1) $\frac{1}{3}$ and $\frac{8}{3}$ (2) $\frac{8}{3}$ and $\frac{7}{3}$

(3) $\frac{1}{3}$ and $\frac{4}{3}$ (4) $\frac{8}{3}$ and $\frac{1}{3}$

**31.** Between 1 to 100, which digit out of 1 and 2 occurs more number of times and by how much?

(1) digit 1 occurs 2 more times than 2

(2) digit 1 occurs 1 more time than 1.

(3) digit 1 and 2 occur equal number of times.

(4) digit 2 occurs 1 more time than 1.


**32.** Select from the options which numbers will replace ∗ and □ respectively in the given example.

```
  ∗ 0 ∗ 0 □
−   1 6 2 ∗
-----------
  □ 9 1 □ 9
```

(1) 7, 8 (2) 6, 7

(3) 8, 7 (4) 7, 6

**33.** Write the number of vertices in the given figure.



(1) 8 (2) 10

(3) 12 (4) 14

**SPACE FOR ROUGH WORK**

30. $\frac{೫}{೩}, \frac{೮}{೩}, \frac{೭}{೩}, \frac{೧}{೩}, \frac{೪}{೩}$ ಈ ಅಪೂರ್ಣಾಂಕಗಳನ್ನು ಇಳಿಕೆ ಕ್ರಮದಲ್ಲಿ ಬರೆದಾಗ ಮೊದಲನೆಯ ಹಾಗೂ ಕೊನೆಯ ಅಪೂರ್ಣಾಂಕ ಅನುಕ್ರಮವಾಗಿ ಯಾವುದು ಬರುತ್ತವೆ.

(1) $\frac{೧}{೩}$ ಹಾಗೂ $\frac{೮}{೩}$
(2) $\frac{೮}{೩}$ ಹಾಗೂ $\frac{೭}{೩}$
(3) $\frac{೧}{೩}$ ಹಾಗೂ $\frac{೪}{೩}$
(4) $\frac{೮}{೩}$ ಹಾಗೂ $\frac{೧}{೩}$

31. ೧ ರಿಂದ ೧೦೦ ಸಂಖ್ಯೆಗಳಲ್ಲಿ ೧ ಹಾಗೂ ೨ ಇವುಗಳ ಪೈಕಿ ಯಾವ ಅಂಕಿಯು ಹೆಚ್ಚು ಸಲ ಬಂದಿದೆ ಹಾಗೂ ಎಷ್ಟರಿಂದ ?


(1) ೧ ಈ ಅಂಕಿಯು ೨ ರಿಂದ ಹೆಚ್ಚು ಸಲ ಬಂದಿದೆ.
(2) ೧ ಈ ಅಂಕಿಯು ೧ ರಿಂದ ಹೆಚ್ಚು ಸಲ ಬಂದಿದೆ.
(3) ೧ ಹಾಗೂ ೨ ಅಂಕಿಯು ಸಮಾನ ಸಲ ಬಂದಿವೆ.
(4) ೨ ಈ ಅಂಕಿಯು ೧ ರಿಂದ ಹೆಚ್ಚು ಸಲ ಬಂದಿದೆ.

32. ಕೆಳಗಿನ ಉದಾಹರಣೆಯಲ್ಲಿ ∗ ಮತ್ತು □ ದ ಸ್ಥಾನದಲ್ಲಿ ಕ್ರಮವಾಗಿ ಯಾವ ಅಂಕಿಯು ಬರುತ್ತವೆ ಎಂಬುದನ್ನು ಪರ್ಯಾಯದಿಂದ ಆಯ್ಕೆ ಮಾಡಿರಿ.

```
  ∗ 0 ∗ 0 □
–   ೧ ೬ ೨ ∗
-----------
  □ ೯ ೧ □ ೯
```

(1) ೭, ೮
(2) ೬, ೭
(3) ೮, ೭
(4) ೭, ೬

33. ಕೆಳಗಿನ ಆಕೃತಿಯಲ್ಲಿಯ ಶಿರೋಬಿಂದುಗಳನ್ನು ಎಣಿಸಿ ಪರ್ಯಾಯದಿಂದ ಆಯ್ಕೆ ಮಾಡಿರಿ.



(1) ೮
(2) ೧೦
(3) ೧೨
(4) ೧೪

**ಕೇವಲ ಕಚ್ಚಾ ಕೆಲಸಕ್ಕಾಗಿ**

**34.** Students are arranged for a music drill. The number of rows is greatest 1 digit odd number. The number of students in each row is smallest 2 digit odd number. How many students are standing for the drill?

(1) 99 (2) 171
(3) 180 (4) 33

**35.** How many symmetrical lines can be drawn in a circle?

(1) one and only 1 (2) 2
(3) infinite (4) not any

**36.** Joseph filled 12 boxes with 18 mangoes in each box. 5 mangoes remained with him. How many mangoes did Joseph have?

(1) 212 (2) 221
(3) 216 (4) 211

**37.** Sumedh distributed pens equal to the number of friends, to every friend. Then, how many pens did he distribute in all?

(1) 27 (2) 38
(3) 53 (4) 49

**38.** Using the digits 9, 5, 0, 4, 1 only once, the smallest 5 digit number written by Ameya was 10459. Safa wrote 01459, Tanvi wrote 95410, Arya wrote 95401. Who wrote the correct number?

(1) Safa (2) Tanvi
(3) Ameya (4) Arya

**39.** For a school picnic, 37 students paid Rs. 455 each. Rs. 12,000 were deposited at State Transport Board. What is the balance amount for other expenses?

(1) 16835 (2) 4835
(3) 28835 (4) 4735

**SPACE FOR ROUGH WORK**

**34.** ಮೈದಾನದಲ್ಲಿ ಸಂಗೀತ ಕವಾಯತಕ್ಕಾಗಿ ವಿದ್ಯಾರ್ಥಿಗಳನ್ನು ನಿಲ್ಲಿಸಲಾಗಿದೆ. ಒಂದು ಅಂಕಿಯ ಎಲ್ಲಕ್ಕೂ ದೊಡ್ಡ ವಿಷಮ ಸಂಖ್ಯೆಯಷ್ಟು ಸಾಲುಗಳಿವೆ. ಹಾಗೂ ಪ್ರತಿಯೊಂದು ಸಾಲಿನಲ್ಲಿ ಎರಡು ಅಂಕಿಯ ಎಲ್ಲಕ್ಕೂ ಚಿಕ್ಕ ವಿಷಮ ಸಂಖ್ಯೆಯಷ್ಟು ವಿದ್ಯಾರ್ಥಿಗಳಿದ್ದಾರೆ. ಹಾಗಾದರೆ ಒಟ್ಟು ಎಷ್ಟು ವಿದ್ಯಾರ್ಥಿಗಳು ಕವಾಯತ ಮಾಡುವುದಕ್ಕಾಗಿ ನಿಂತಿದ್ದಾರೆ ?

(1) ೯೯  (2) ೧೭೧
(3) ೧೮೦  (4) ೩೩

**35.** ವರ್ತುಳಕ್ಕೆ ಎಷ್ಟು ಸಮಮಿತಿ ಅಕ್ಷಗಳನ್ನು ತೆಗೆಯಲು ಬರುತ್ತದೆ ?

(1) ಒಂದು ಮತ್ತು ಒಂದೇ  (2) ಎರಡು
(3) ಅಸಂಖ್ಯ  (4) ಒಂದೂ ಇಲ್ಲ

**36.** ಜೊಸೆಫನು ಒಂದು ಪೆಟ್ಟಿಗೆಯಲ್ಲಿ ೧೮ ಮಾವು ಈ ಪ್ರಮಾಣವಾಗಿ ೧೨ ಪೆಟ್ಟಿಗೆಯನ್ನು ತುಂಬಿದಾಗ ೫ ಮಾವು ಉಳಿದವು. ಹಾಗಾದರೆ ಜೊಸೆಫನ ಕಡೆಗೆ ಎಷ್ಟು ಮಾವುಗಳಿದ್ದವು ?

(1) ೨೧೨  (2) ೨೨೧
(3) ೨೧೬  (4) ೨೧೧

**37.** ಸುಮೇಧನಿಗೆ ಎಷ್ಟು ಗೆಳೆಯರಿದ್ದಾರೋ ಅಷ್ಟೆ ಪೆನ್ನನ್ನು ಪ್ರತಿಯೊಬ್ಬ ಗೆಳೆಯನಿಗೆ ಹಂಚಿದನು. ಹಾಗಾದರೆ ಅವನು ಕೆಳಗಿನವುಗಳ ಪೈಕಿ ಒಟ್ಟು ಎಷ್ಟು ಪೆನ್ನು ಹಂಚಿದಂತಾಗುವುದು ?

(1) ೨೭  (2) ೩೮
(3) ೫೩  (4) ೪೯

**38.** ೯, ೫, ೦, ೪, ೧ ಈ ಅಂಕಿಗಳ ಪುನರಾವೃತ್ತಿ ಮಾಡದೇ ಐದಂಕಿಯ ಎಲ್ಲಕ್ಕೂ ಚಿಕ್ಕ ಸಂಖ್ಯೆ ಅಮೇಯನು ೧೦೪೫೯, ಸಫಾಳು ೦೧೪೫೯, ತನ್ವಿಯು ೯೫೪೧೦ ಹಾಗೂ ಆರ್ಯನು ೯೫೪೦೧ ಹೀಗೆ ಬರೆದಿರುವರು. ಹಾಗಾದರೆ ಯೋಗ್ಯವಾದ ಸಂಖ್ಯೆಯನ್ನು ಯಾರು ಬರೆದರು ?

(1) ಸಫಾ  (2) ತನ್ವಿ
(3) ಅಮೇಯ  (4) ಆರ್ಯ

**39.** ಶಾಲೆಯ ಪ್ರವಾಸಕ್ಕಾಗಿ ೩೭ ವಿದ್ಯಾರ್ಥಿಗಳು ಪ್ರತಿಯೊಬ್ಬರಂತೆ ೪೫೫ ರೂಪಾಯಿಗಳನ್ನು ಸಂಗ್ರಹ ಮಾಡಿದರು. ಅದರಲ್ಲಿಯ ೧೨೦೦೦ ರೂಪಾಯಿ ಬಸ್ಸಿನ ಸಲುವಾಗಿ ಉಪಯೋಗ ಮಾಡಲಾಯಿತು. ಹಾಗಾದರೆ ಇತರ ಖರ್ಚಿಗಾಗಿ ಎಷ್ಟು ರೂಪಾಯಿ ಉಳಿದವು ?

(1) ೧೬೮೩೫  (2) ೪೮೩೫
(3) ೨೮೮೩೫  (4) ೪೭೩೫

<u>**ಕೇವಲ ಕಚ್ಚಾ ಕೆಲಸಕ್ಕಾಗಿ**</u>

**40.** Identify the 3 numbers occuring in the following pattern.

100, 99, 97, 94, 90, ____, ____, ____

(1) 86, 81, 75 (2) 84, 79, 73

(3) 85, 79, 72 (4) 85, 80, 76

**41.** Which of the following fractions is greater than $\frac{4}{7}$?

(1) $\frac{3}{7}$ (2) $\frac{2}{7}$

(3) $\frac{1}{7}$ (4) $\frac{4}{3}$

**42.** In July, 14456 students visited the Science Center. In August, 19656 students visited the Science Centre. How many students, in all, visited the Science Centre in two months?

(1) 24002 (2) 34012

(3) 34112 (4) 5200

**43.** Sheetal wrote 5 ten thousand + 1 unit + 9 tens + 4 hundreds as 5491. What is the difference between the number and her written number?

(1) 55982 (2) 45000

(3) 0 (4) 4500

**44.** Select a number from the options to replace □.

```
     6□
8)53□
 – 48
   05□
   –5 6
    0 1
```

(1) 8 (2) 7 (3) 5 (4) 6

**SPACE FOR ROUGH WORK**

**40.** ಕೆಳಗಿನ ಆಕೃತಿ ಬಂಧದಲ್ಲಿ ಮುಂದೆ ಬರುವ ಮೂರೂ ಸಂಖ್ಯೆಗಳನ್ನು ಗುರುತಿಸಿರಿ.
೧೦೦, ೯೯, ೯೭, ೯೪, ೯೦, ....., ......, ......

(1) ೮೬, ೮೧, ೭೫ (2) ೮೪, ೭೯, ೭೩
(3) ೮೫, ೭೯, ೭೨ (4) ೮೫, ೮೦, ೭೬

**41.** $\frac{೪}{೭}$ ಈ ಅಪೂರ್ಣಾಂಕಕ್ಕಿಂತ ಕೆಳಗಿನವುಗಳಲ್ಲಿಯ ಯಾವ ಅಪೂರ್ಣಾಂಕವು ದೊಡ್ಡದಿದೆ ?

(1) $\frac{೩}{೭}$ (2) $\frac{೨}{೭}$
(3) $\frac{೧}{೭}$ (4) $\frac{೪}{೩}$

**42.** ಒಂದು ವಿಜ್ಞಾನ ಕೇಂದ್ರಕ್ಕೆ ಜುಲೈ ತಿಂಗಳಿನಲ್ಲಿ ೧೪೪೫೬ ಹಾಗೂ ಅಗಸ್ಟ ತಿಂಗಳಿನಲ್ಲಿ ೧೯೬೫೬ ವಿದ್ಯಾರ್ಥಿಗಳು ಭೇಟಿ ನೀಡಿದರು. ಹಾಗಾದರೆ ಎರಡೂ ತಿಂಗಳು, ಸೇರಿ ಒಟ್ಟು ಎಷ್ಟು ವಿದ್ಯಾರ್ಥಿಗಳು ಭೇಟಿ ನೀಡಿದರು ?

(1) ೨೪೦೦೨ (2) ೩೪೦೧೨
(3) ೩೪೧೧೨ (4) ೫೨೦೦

**43.** ಶೀತಲಳು ೫ ದಶಸಾವಿರ + ೧ ಏಕಕ + ೯ ದಶಕ + ೪ ಶತಕ ಈ ಸಂಖ್ಯೆಯನ್ನು ೫೪೯೧ ಹೀಗೆ ಬರೆದಾಗ ಅವಳು ಬರೆದ ಸಂಖ್ಯೆ ಹಾಗೂ ಮೂಲಸಂಖ್ಯೆ ಇವುಗಳಲ್ಲಿಯ ವ್ಯತ್ಯಾಸವೆಷ್ಟು?

(1) ೫೫೯೮೨ (2) ೪೫೦೦೦
(3) ೦ (4) ೪೫೦೦

**44.** ಕೆಳಗಿನ ಉದಾಹರಣೆಯಲ್ಲಿ □ ದ ಸ್ಥಾನದಲ್ಲಿ ಯಾವ ಅಂಕಿ ಬರುತ್ತದೆ ? ಎಂಬುದನ್ನು ಪರ್ಯಾಯದಿಂದ ಆಯ್ಕೆ ಮಾಡಿರಿ.

```
    ೬□
೮)೫೩□
 −೪೮
  ೦೫□
  −೫೬
   ೦೧
```

(1) ೮ (2) ೭ (3) ೫ (4) ೬

**ಕೇವಲ ಕಚ್ಚಾ ಕೆಲಸಕ್ಕಾಗಿ**

**45.** A Company manufactures 14 three wheelers and some four wheeler vehicles in a day. The total number of wheels of all vehicles is 146. How many four wheelers vehicles were there?

(1) 42
(2) 104
(3) 108
(4) 26

**46.** Shrikant earned Rs. 33600 by selling 16 sacks of marigold flowers. If he has sold 1 kg of flowers for Rs. 60, how many kilograms of flowers did he sell?

(1) 35
(2) 45
(3) 560
(4) 550

**Instructions For Questions No. 47 to 49 :**

The given pictograph represents the snacks eaten by girl students in a college canteen on Sunday morning. Answer the questions using this information.

| Name of food items | Number of girl students |
|---|---|
| Idli-chutney | ☺ ☺ ☺ ☺ ☺ ☺ ☺ |
| Kande pohe | ☺ ☺ ☺ ☺ |
| Upma | ☺ ☺ |
| Masala dosa | ☺ ☺ ☺ ☺ ☺ |

Scale ☺ = 7 girl students.

**47.** What is the total number of girl students eating kande pohe and masala dosa?

(1) 28
(2) 63
(3) 35
(4) 77

**SPACE FOR ROUGH WORK**

**45.** ಒಂದು ಕಂಪನಿಯು ಒಂದು ದಿನದಲ್ಲಿ ಮೂರು ಗಾಲಿಯ ೧೪ ಹಾಗೂ ನಾಲ್ಕು ಗಾಲಿಯ ಕೆಲವೊಂದು ವಾಹನ ತಯಾರಿಸಿತು. ಎಲ್ಲ ವಾಹನಗಳ ಗಾಲಿಯ ಒಟ್ಟು ಸಂಖ್ಯೆ ೧೪೬ ಇದ್ದರೆ ನಾಲ್ಕು ಗಾಲಿಯ ವಾಹನಗಳ ಸಂಖ್ಯೆ ಎಷ್ಟು ಇರುವುದು ?

(1) ೪೨ (2) ೧೦೪
(3) ೧೦೮ (4) ೨೬

**46.** ಶ್ರೀಕಾಂತನು ೧೬ ಚೀಲ ಚೆಂಡು ಹೂವು ಮಾರಿ ೩೩೬೦೦ ರೂಪಾಯಿಗಳನ್ನು ಪಡೆದುಕೊಂಡನು. ಒಂದುವೇಳೆ ಅವನು ಒಂದು ಕಿಲೋ ಹೂವು ೬೦ ರೂ. ದರದಂತೆ ಮಾರಿದರೆ ಒಟ್ಟು ಎಷ್ಟು ಕಿಲೋ ಹೂವನ್ನು ಮಾರಿದನು ?

(1) ೩೫ (2) ೪೫
(3) ೫೬೦ (4) ೫೫೦

**ಪ್ರಶ್ನೆ ಕ್ರಮಾಂಕ 47, 48, 49 ಕ್ಕಾಗಿ ಸೂಚನೆ**

ಕಾಲೇಜಿನ ಉಪಹಾರಗೃಹದಲ್ಲಿ ರವಿವಾರ ಮುಂಜಾನೆ ವಿದ್ಯಾರ್ಥಿನಿಯರು ತಿಂದ ಪದಾರ್ಥ ಚಿತ್ರರೂಪದಲ್ಲಿ ಕೊಡಲಾಗಿದೆ. ಕೊಟ್ಟ ಮಾಹಿತಿಯ ಆಧಾರದ ಮೇಲಿಂದ ಪ್ರಶ್ನೆಗಳಿಗೆ ಉತ್ತರ ಕೊಡಿರಿ

| ಪದಾರ್ಥಗಳ ಹೆಸರು | ವಿದ್ಯಾರ್ಥಿನಿಯರ ಸಂಖ್ಯೆ |
|---|---|
| ಇಡ್ಲಿ ಚಟ್ನಿ | ☺ ☺ ☺ ☺ ☺ ☺ ☺ |
| ಅವಲಕ್ಕಿ | ☺ ☺ ☺ ☺ |
| ಉಪ್ಪಿಟ್ಟು | ☺ ☺ |
| ಮಸಾಲೆ ದೋಸೆ | ☺ ☺ ☺ ☺ ☺ |

ಪ್ರಮಾಣ ☺ = ೭ ವಿದ್ಯಾರ್ಥಿನಿಯರು

**47.** ಅವಲಕ್ಕಿ ಹಾಗೂ ಮಸಾಲೆ ದೋಸೆ ತಿಂದ ವಿದ್ಯಾರ್ಥಿನಿಯರ ಒಟ್ಟು ಸಂಖ್ಯೆ ಎಷ್ಟು?

(1) ೨೮ (2) ೬೩
(3) ೩೫ (4) ೭೭

**ಕೇವಲ ಕಚ್ಚಾ ಕೆಲಸಕ್ಕಾಗಿ**

**48.** How much less or more is the number of girl students eating kande pohe and upma than the girls eating idli chutney and masala dosa?

(1) less by 42 (2) more by 42
(3) less by 84 (4) more by 84

**49.** Which food item is consumed very less?

(1) Idli chutney (2) Kande pohe
(3) Upma (4) Masala dosa

**50.** Identify the fractions with common denominator.


$\frac{4}{5}, \frac{3}{4}, \frac{5}{6}, \frac{6}{5}, \frac{4}{3}, \frac{1}{2}, \frac{1}{7}$

(1) $\frac{1}{2}, \frac{1}{7}$ (2) $\frac{4}{5}, \frac{4}{3}$
(3) $\frac{5}{6}, \frac{6}{5}$ (4) $\frac{4}{5}, \frac{6}{5}$

**51.** The area of a rectangle and a square is same and is 64 sq.cm. If the length of a rectangle is 16 cm, what will be its breadth?

(1) 16 cm. (2) 4 cm.
(3) 8 cm. (4) 32 cm.

**52.** Find the perimeter of the given figure.




(1) 30 (2) 25
(3) 27 (4) 17

**53.** Suraj divided 96 by 16 instead of 6. Then, by how much is his division wrong?

(1) 16 (2) 10
(3) 6 (4) 22

**SPACE FOR ROUGH WORK**

48. ಅವಲಕ್ಕಿ ಹಾಗೂ ಉಪ್ಪಿಟ್ಟು ತಿಂದ ವಿದ್ಯಾರ್ಥಿನಿಯರ ಸಂಖ್ಯೆ ಇಡ್ಲಿ ಚಟ್ನಿ ಹಾಗೂ ಮಸಾಲೆ ದೋಸೆ ತಿಂದ ವಿದ್ಯಾರ್ಥಿನಿಯರ ಸಂಖ್ಯೆಗಿಂತ ಎಷ್ಟು ಕಡಿಮೆ ಅಥವಾ ಹೆಚ್ಚು ಇದೆ ?

(1) ೪೨ ರಿಂದ ಕಡಿಮೆ ಇದೆ. (2) ೪೨ ರಿಂದ ಹೆಚ್ಚು ಇದೆ.

(3) ೮೪ ರಿಂದ ಕಡಿಮೆ ಇದೆ. (4) ೮೪ ರಿಂದ ಹೆಚ್ಚು ಇದೆ.

49. ಉಪಹಾರಗೃಹದಲ್ಲಿ ವಿದ್ಯಾರ್ಥಿನಿಯರು ಯಾವ ಪದಾರ್ಥವನ್ನು ಎಲ್ಲಕ್ಕೂ ಕಡಿಮೆ ತಿಂದಿದ್ದಾರೆ ?

(1) ಇಡ್ಲಿ ಚಟ್ನಿ (2) ಅವಲಕ್ಕಿ

(3) ಉಪ್ಪಿಟ್ಟು (4) ಮಸಾಲೆದೋಸೆ

50. ಕೆಳಗಿನ ಅಪೂರ್ಣಾಂಕಗಳಪೈಕಿ ಸಮಭೇದ ಅಪೂರ್ಣಾಂಕ ಗುರುತಿಸಿರಿ.

$\frac{೪}{೫}, \frac{೩}{೪}, \frac{೫}{೬}, \frac{೬}{೫}, \frac{೪}{೩}, \frac{೧}{೭}, \frac{೧}{೨}$

(1) $\frac{೧}{೩}, \frac{೧}{೨}$ (2) $\frac{೪}{೫}, \frac{೪}{೩}$


(3) $\frac{೫}{೬}, \frac{೬}{೫}$ (4) $\frac{೪}{೫}, \frac{೬}{೫}$

51. ಆಯತದ ಹಾಗೂ ಚೌರಸದ ಕ್ಷೇತ್ರಫಲ ಸಮಾನವಿದ್ದು ಅವು ೬೪ ಚೌಸೆಮೀ. ಇವೆ. ಒಂದು ವೇಳೆ ಆಯತದ ಉದ್ದ ೧೬ ಸೆಮೀ ಇದ್ದರೆ ಆಯತದ ಅಗಲ ಎಷ್ಟು ?

(1) ೧೬ ಸೆಮೀ. (2) ೪ ಸೆಮೀ.

(3) ೮ ಸೆಮೀ. (4) ೩೨ ಸೆಮೀ.

52. ಕೆಳಗಿನ ಆಕೃತಿಯ ಪರಿಮಿತಿ ತೆಗೆಯಿರಿ.




(1) ೩೦ (2) ೨೫ (3) ೨೭ (4) ೧೭

53. ಸೂರಜನು ೯೬ ಕ್ಕೆ ೬ ರಿಂದ ಭಾಗಿಸುವ ಬದಲು ೧೬ ರಿಂದ ಭಾಗಿಸಿದನು. ಹಾಗಾದರೆ ಅವನ ಭಾಗಾಕಾರ ಎಷ್ಟರಿಂದ ತಪ್ಪಿತು ?

(1) ೧೬ (2) ೧೦ (3) ೬ (4) ೨೨

**ಕೇವಲ ಕಚ್ಚಾ ಕೆಲಸಕ್ಕಾಗಿ**

**54.** There are 5719 elephants in Assam. Meghalaya has 3965 more elephants than in Assam. Then, how many elephants are there in Meghalaya?

(1) 8674 (2) 1754

(3) 1854 (4) 9684

**55.** While purchasing a refrigerator, Suhas gave a cheque of Rs. 64389/- to the shopkeeper. How will he write the amount, in words, on the cheque?

(1) Sixty four thousand three hundred and seventy nine.

(2) Sixty four thousand three hundred and ninety eight.

(3) Sixty four thousand three hundred and eighty nine.


(4) Sixty four thousand eight hundred and nine.


**56.** For travel, Shabnam thought of two options as Airways and Railways. The Air ticket fare was Rs. 13756/- and the Rail ticket fare was Rs. 2398/-. By how much is the Air ticket fare more than the Rail ticket fare?


(1) Rs. 11358/- (2) Rs. 16154/-


(3) Rs. 11442/- (4) Rs. 11468/-

**57.** In the figures given below, which option of shaded portion indicates a proper fraction?


(a)


(b)


(c)


(d)

(1) a (2) b

(3) c (4) d

**SPACE FOR ROUGH WORK**

**54.** ಆಸಾಮದಲ್ಲಿ ೫೭೧೯ ಆನೆಗಳಿವೆ. ಆಸಾಮಕ್ಕಿಂತಲೂ ೩೯೬೫ ಹೆಚ್ಚು ಆನೆಗಳು ಮೇಘಾಲಯದಲ್ಲಿವೆ. ಹಾಗಾದರೆ ಮೇಘಾಲಯದಲ್ಲಿ ಎಷ್ಟು ಹೆಚ್ಚು ಆನೆಗಳಿವೆ ?

(1) ೮೬೭೪ (2) ೧೭೫೪

(3) ೧೮೫೪ (4) ೯೬೮೪

**55.** ಸುಹಾಸನು 'ಫ್ರೀಜ್' ಖರೀದಿ ಮಾಡುವುದಕ್ಕಾಗಿ ಅಂಗಡಿಯವನಿಗೆ ೬೪೩೮೯ ರೂಪಾಯಿಗಳ 'ಧನಾದೇಶ' (ಚೆಕ್) ಕೊಟ್ಟನು. ಧನಾದೇಶದಲ್ಲಿಯ ಈ ಮೊತ್ತವನ್ನು (ಹಣವನ್ನು) ಅವನು ಅಕ್ಷರದಲ್ಲಿ ಹೇಗೆ ಬರೆಯುವನು ?

(1) ಅರವತ್ತ್ನಾಲ್ಕು ಸಾವಿರದಾ ಮೂರುನೂರಾ ಎಪ್ಪತ್ತೊಂಬತ್ತು.

(2) ಅರವತ್ತ್ನಾಲ್ಕು ಸಾವಿರದಾ ಮೂರುನೂರಾ ತೊಂಬತ್ತೆಂಟು.

(3) ಅರವತ್ತ್ನಾಲ್ಕು ಸಾವಿರದಾ ಮೂರುನೂರಾ ಎಂಬತ್ತೊಂಬತ್ತು.


(4) ಅರವತ್ತ್ನಾಲ್ಕು ಸಾವಿರದಾ ಎಂಟುನೂರಾ ಒಂಬತ್ತು.

**56.** ಶಬ್ನಮನು ಪ್ರಯಾಣಕ್ಕಾಗಿ ವಿಮಾನ ಹಾಗೂ ರೈಲು ಹೀಗೆ ಎರಡು ಪರ್ಯಾಯಗಳ ವಿಚಾರ ಮಾಡಿದನು. ವಿಮಾನದ ತಿಕೀಟು ೧೩೭೫೬ ರೂಪಾಯಿ ಇದ್ದು, ರೈಲಿನ ತಿಕೀಟು ೨೩೯೮ ರೂಪಾಯಿಗಳು ಇದ್ದವು. ಹಾಗಾದರೆ ವಿಮಾನದ ತಿಕೀಟು ರೈಲಿನ ತಿಕೀಟಕ್ಕಿಂತ ಎಷ್ಟರಿಂದ ಹೆಚ್ಚು ಇತ್ತು ?

(1) ೧೧೩೫೮ (2) ೧೬೧೫೪

(3) ೧೧೪೪೨ (4) ೧೧೪೬೮

**57.** ಕೆಳಗಿನ ಯಾವ ಆಕೃತಿಯಲ್ಲಿಯ ಬಣ್ಣತುಂಬಿದ ಭಾಗವು ಛೇದಾಧಿಕ ಅಪೂರ್ಣಾಂಕ ತೋರಿಸುತ್ತದೆ ?




(1) ಅ (2) ಬ


(3) ಕ (4) ಡ

**ಕೇವಲ ಕಚ್ಚಾ ಕೆಲಸಕ್ಕಾಗಿ**

**58.** Shivam needs 15 minutes to water the backyard of the school. To water the same backyard, Seema needs a quarter of an hour, Sonali needs 900 seconds and Rahul takes half an hour. Then, who needs the longest time to water the backyard?


(1) Shivam
(2) Rahul
(3) Sonali
(4) Seema

**59.** What is the number of diameter and radii respectively in the given circle?



(1) 6, 2
(2) 6, 3
(3) 3, 6
(4) 2, 6


**60.** In the figure given below, in which of the clock, the hands are not forming an obtuse angle?



(a) (b) (c) (d)

(1) a
(2) c
(3) d
(4) b

**61.** Which 3 dimensional figure is formed when the paper is folded at the given lines.



(a) (b) (c) (d)


(1) d
(2) a
(3) b
(4) c

**SPACE FOR ROUGH WORK**

**58.** ಶಾಲೆಯಲ್ಲಿಯ ಕೈತೋಟಕ್ಕೆ ನೀರು ಹಾಕುವುದಕ್ಕಾಗಿ ಶಿವಮ್‌ನಿಗೆ ೧೫ ನಿಮಿಷಗಳು, ಸೀಮಾಳಿಗೆ ಕಾಲು ಗಂಟೆ, ಸೋನಾಲಿಗೆ ೯೦೦ ಸೆಕೆಂಡು ಹಾಗೂ ರಾಹೂಲನಿಗೆ ಅರ್ಧ ಗಂಟೆ ಬೇಕಾಗುತ್ತದೆ. ಹಾಗಾದರೆ ನೀರು ಹಾಕಲು ಎಲ್ಲಕ್ಕೂ ಹೆಚ್ಚು ಸಮಯ ಯಾರಿಗೆ ಬೇಕಾಗುತ್ತದೆ ?


(1) ಶಿವಮ್ (2) ರಾಹೂಲ
(3) ಸೋನಾಲಿ (4) ಸೀಮಾ

**59.** ಕೊಟ್ಟ ವರ್ತುಳದಲ್ಲಿ ವ್ಯಾಸ ಹಾಗೂ ತ್ರಿಜ್ಯ ಇವುಗಳ ಸಂಖ್ಯೆ ಅನುಕ್ರಮವಾಗಿ ಎಷ್ಟು ಇದೆ.



(1) ೬, ೨ (2) ೬, ೩
(3) ೩, ೬ (4) ೨, ೬


**60.** ಕೆಳಗಿನವುಗಳಲ್ಲಿ ಯಾವ ಗಡಿಯಾರದಲ್ಲಿಯ ಎರಡು ಮುಳ್ಳುಗಳ ನಡುವೆ ವಿಶಾಲಕೋನ ಆಗಿರುವುದಿಲ್ಲ



(ಅ) (ಬ) (ಕ) (ಡ)

(1) ಅ (2) ಕ
(3) ಡ (4) ಬ

**61.** ಕೆಳಗಿನ ಆಕೃತಿಯಲ್ಲಿ ಕೊಟ್ಟಿರುವ ರೇಷೆಗಳ ಮೇಲೆ ಮಡಿಕೆ ಹಾಕಿದಾಗ ಯಾವ ತ್ರಿಮಿತಿಯ ಆಕೃತಿ ತಯಾರಾಗುವುದು ?



(ಅ) (ಬ) (ಕ) (ಡ)

(1) ಡ (2) ಅ
(3) ಬ (4) ಕ

**ಕೇವಲ ಕಚ್ಚಾ ಕೆಲಸಕ್ಕಾಗಿ**

**62.** The arrival time of Chennama Express at the station was 8.00 p.m. on Monday. If the train arrived 5 hours late, then at what time did the train arrive?

(1) Monday 1.00 a.m.

(2) Monday 1.00 p.m.

(3) Tuesday 1.00 p.m.

(4) Tuesday 1.00 a.m.

**63.** Megha has equal number of notes of denomination of Rs. 50, Rs. 100, Rs. 200 and Rs. 500. The total amount is Rs. 3400/-. Then, how many notes does she have?

(1) 16 (2) 4

(3) 8 (4) 12

**64.** Saniya has 1 Ream of papers. She has to file 1 quire papers in each file. How many files will she require to file all the papers?

(1) 40 (2) 24

(3) 20 (4) 480

**65.** One cuboid is cut and 2 cubes of equal size are formed. Which of the following statements is true with respect to the numbers of edges of cube and number of edges of cuboid?

(1) Number of edges of cubes is 12 less than the number of edges of cuboid.

(2) Number of edges of cubes is 12 more than the number of edges of cuboid.

(3) Number of edges of cubes is same as the number of edges of cuboid.

(4) Number of edges of cubes is half the number of edges of cuboid.

**SPACE FOR ROUGH WORK**

62. ರಾಣಿ ಚೆನ್ನಮ್ಮಾ ಎಕ್ಸಪ್ರೆಸ್ ಸ್ಟೇಶನಿನ ಮೇಲೆ ಆಗಮನ ವೇಳೆ ಸೋಮವಾರ ಮಧ್ಯಾಹ್ನೋತ್ತರ ೮ ಗಂಟೆಗೆ ಇತ್ತು. ಆ ಗಾಡಿಯ ಬರಲು ೫ ಗಂಟೆ ತಡವಾಯಿತು ಹಾಗಾದರೆ ಆ ಗಾಡಿಯು ಎಷ್ಟು ಗಂಟೆಗೆ ಸ್ಟೇಶನದಲ್ಲಿ ಬಂದಿತು ?

(1) ಸೋಮವಾರ ಮಧ್ಯಾಹ್ನಪೂರ್ವ ೧ ಗಂಟೆಗೆ

(2) ಸೋಮವಾರ ಮಧ್ಯಾಹ್ನೋತ್ತರ ೧ ಗಂಟೆಗೆ

(3) ಮಂಗಳವಾರ ಮಧ್ಯಾಹ್ನೋತ್ತರ ೧ ಗಂಟೆಗೆ

(4) ಮಂಗಳವಾರ ಮಧ್ಯಾಹ್ನಪೂರ್ವ ೧ ಗಂಟೆಗೆ

63. ಮೇಘಾಳ ಹತ್ತಿರವಿರುವ ೫೦, ೧೦೦, ೨೦೦ ಹಾಗೂ ೫೦೦ರ ನೋಟುಗಳ ಸಂಖ್ಯೆ ಸಮಾನ ಇವೆ. ಹಾಗೂ ಅವುಗಳ ಒಟ್ಟು ಮೊತ್ತ ೩೪೦೦ ರೂಪಾಯಿಗಳಾಗುತ್ತದೆ. ಹಾಗಾದರೆ ಅವಳ ಕಡೆಗೆ ಒಟ್ಟು ಎಷ್ಟು ನೋಟುಗಳಿದ್ದವು ?

(1) ೧೬ (2) ೪

(3) ೮ (4) ೧೨

64. ಸಾನಿಯಾಳಕಡೆಗೆ ೧ ರಿಮ್ ಕಾಗದ ಇರುತ್ತವೆ. ಅವಳಿಗೆ ಪ್ರತಿಯೊಂದು ಫಾಯಿಲಿನಲ್ಲಿ ೧ ದಸ್ತಕಾಗದ ಇಡಬೇಕಾಗಿದೆ. ಹಾಗಾದರೆ ಎಲ್ಲ ಕಾಗದವನ್ನು ಇಡುವುದಕ್ಕಾಗಿ ಅವಳಿಗೆ ಎಷ್ಟು ಫಾಯಿಲ್ ಬೇಕಾಗುವುವು?

(1) ೪೦ (2) ೨೪

(3) ೨೦ (4) ೪೮೦

65. ಒಂದು ಇಷ್ಟಿಕಾಚಿತಿಯನ್ನು ಕತ್ತರಿಸಿ ಅದರ ಎರಡು ಸಮಾನ ಅಳತೆಗಳ ಘನ ತಯಾರಿಸಲಾಯಿತು. ಎರಡು ಘನಗಳ ಅಂಚುಗಳ ಸಂಖ್ಯೆ ಹಾಗೂ ಇಷ್ಟಿಕಾಚಿತಿಯ ಅಂಚುಗಳ ಸಂಖ್ಯೆಯ ಬಗ್ಗೆ ಕೆಳಗಿನವುಗಳಲ್ಲಿಯ ಯಾವ ವಿಧಾನವು ಸತ್ಯವಿದೆ ?

(1) ಘನದ ಅಂಚುಗಳ ಸಂಖ್ಯೆ ಇಷ್ಟಿಕಾಚಿತಿಯ ಅಂಚುಗಳ ಸಂಖ್ಯೆಗಿಂತ ೧೨ ರಿಂದ ಕಡಿಮೆ ಇದೆ.


(2) ಘನದ ಅಂಚುಗಳ ಸಂಖ್ಯೆ ಇಷ್ಟಿಕಾಚಿತಿಯ ಅಂಚುಗಳ ಸಂಖ್ಯೆಗಿಂತ ೧೨ ರಿಂದ ಹೆಚ್ಚಿಗೆ ಇದೆ.


(3) ಘನಗಳ ಹಾಗೂ ಇಷ್ಟಿಕಾಚಿತಿಯ ಅಂಚುಗಳ ಸಂಖ್ಯೆ ಸಮಾನ ಇವೆ.


(4) ಘನಗಳ ಅಂಚುಗಳ ಸಂಖ್ಯೆ ಇಷ್ಟಿಕಾಚಿತಿಯ ಅಂಚುಗಳ ಅರ್ಧ ಇದೆ.


**ಕೇವಲ ಕಚ್ಚಾ ಕೆಲಸಕ್ಕಾಗಿ**


**66.** Which figure will replace '?' in the below given figure pattern?




(1)



(2)



(3)



(4)



**67.** If Teachers' Day in 2026 falls on Saturday then what day will be the Childrens' Day in the same year?

(1) Monday
(2) Sunday
(3) Friday
(4) Saturday

**68.** Which of the following options express the fraction $\frac{3}{4}$ in incorrect form?

(1) $3 \times \frac{1}{4}$


(2) $3 + \frac{1}{4}$


(3) $\frac{1}{4} + \frac{1}{4} + \frac{1}{4}$


(4) 3 times $\frac{1}{4}$


**SPACE FOR ROUGH WORK**


**66.** ಕೆಳಗಿನ ಆಕೃತಿ ಬಂಧದಲ್ಲಿ ಮುಂದೆ ಬರಲಿರುವ ಚಿತ್ರ ಯಾವುದು ?




(1) 


(2) 


(3) 


(4) 


**67.** ೨೦೨೬ ರಂದು ಶಿಕ್ಷಕರ ದಿನಾಚರಣೆ ಶನಿವಾರದಂದು ಬಂದರೆ ಅದೇ ವರ್ಷದಲ್ಲಿ ಮಕ್ಕಳ ದಿನಾಚರಣೆ ಯಾವ ದಿನದಂದು ಬರುತ್ತದೆ ?

(1) ಸೋಮವಾರ
(2) ರವಿವಾರ
(3) ಶುಕ್ರವಾರ
(4) ಶನಿವಾರ

**68.** $\frac{೩}{೪}$ ಈ ಅಪೂರ್ಣಾಂಕವನ್ನು ಕೆಳಗಿನವುಗಳಲ್ಲಿಯ ಯಾವ ಸ್ವರೂಪದಲ್ಲಿ ಬರೆದರೆ ತಪ್ಪಾಗಿರುವುದು ?

(1) $೩ \times \frac{೧}{೪}$


(2) $೩ + \frac{೧}{೪}$

(3) $\frac{೧}{೪} + \frac{೧}{೪} + \frac{೧}{೪}$

(4) $\frac{೧}{೪}$ ರ ೩ ಪಟ್ಟು

**ಕೇವಲ ಕಚ್ಚಾ ಕೆಲಸಕ್ಕಾಗಿ**

**69.** Which of the following options does not indicate the fraction expressed in figure?



(1) One and half  (2) 2 and half

(3) Two full and half  (4) $2\frac{1}{2}$

**70.** Mother filled Amla sherbat in 4 bottles with $\frac{1}{2}$ litre in each bottle. A quarter litre sherbat is remaining. How many litres of sherbat did she make?


(1) 2 litres



(2) One and a half litre



(3) 2 and a quarter litre

(4) 3 litres

**71.** Which of the following options will appear in the picture pattern?




(1)   (2) 

(3)   (4) 

**SPACE FOR ROUGH WORK**

**69.** ಕೆಳಗೆ ಕೊಟ್ಟ ಪರ್ಯಾಯಗಳಲ್ಲಿ ಯಾವ ಪರ್ಯಾಯವು ಕೆಳಗಿನ ಆಕೃತಿಯಲ್ಲಿಯ ಅಪೂರ್ಣಾಂಕವನ್ನು ತೋರಿಸುವುದಿಲ್ಲ ?



(1) ಒಂದುವರೆ (2) ಎರಡುವರೆ


(3) ಎರಡು ಪೂರ್ಣ ಮತ್ತು ಅರ್ಧ (4) ೨ $\frac{೧}{೨}$


**70.** ತಾಯಿಯು ಅರ್ಧ ಲೀಟರ್ ನೆಲ್ಲಿಕಾಯಿಯ ಶರಬತ್ತನ್ನು ಒಂದು ಬಾಟಲಿಯಲ್ಲಿ ಈ ಪ್ರಮಾಣವಾಗಿ ನಾಲ್ಕು ಬಾಟಲಿಗಳನ್ನು ತುಂಬಿದಾಗ ಕಾಲು ಲೀಟರ್ ಶರಬತ್ತು ಉಳಿಯಿತು. ಹಾಗಾದರೆ ತಾಯಿಯು ಎಷ್ಟು ಲೀಟರ್ ಶರಬತ್ತನ್ನು ತಯಾರಿಸಿದ್ದಳು ?


(1) ಎರಡು (2) ಒಂದು ವರೆ


(3) ಎರಡು ಕಾಲು (4) ಮೂರು


**71.** ಕೆಳಗಿನ ಆಕೃತಿ ಬಂಧದಲ್ಲಿ ಮುಂದೆ ಬರುವ ಚಿತ್ರ ಯಾವುದು ?

 ?

(1) 

(2) 

(3) 

(4) 

**ಕೇವಲ ಕಚ್ಚಾ ಕೆಲಸಕ್ಕಾಗಿ**

**72.** Between 1 to 100, by how much is the biggest prime number greater than the smallest prime number?

(1) 96 (2) 97

(3) 98 (4) 95

**73.** Manoj plucked 5 kg. grapes from a grape wine yard. He filled 3 boxes each with half kg grapes, 2 boxes each with a quarter kg. grapes and some boxes with 1 kg. grapes. How many 1 kg. boxes did he fill?

(1) 1 (2) 3

(3) 2 (4) 5

**74.** Swara bought 2 books of Ganit Pravinya exam for Rs. 175/- each. She gave Rs. 500/- note to the shopkeeper. He returned some Rs. 50/- notes to her. How many Rs. 50/- notes did the shopkeeper return to Swara?

(1) 3 (2) 15

(3) 30 (4) 2

**75.** The number of edges of a cylinder is _______________ the number of vertices of the cylinder.

(1) less by 2 (2) less by 1

(3) More by 2 (4) More by 1

**SPACE FOR ROUGH WORK**

**72.** ೧ ರಿಂದ ೧೦೦ ಸಂಖ್ಯೆಗಳಲ್ಲಿಯ ಎಲ್ಲಕ್ಕೂದೊಡ್ಡ ಮೂಲಸಂಖ್ಯೆ ಇದು ಎಲ್ಲಕ್ಕೂ ಚಿಕ್ಕ ಮೂಲಸಂಖ್ಯೆಗಿಂತ ಎಷ್ಟರಿಂದ ದೊಡ್ಡದಿದೆ ?

(1) ೯೬ (2) ೯೭

(3) ೯೮ (4) ೯೫

**73.** ಮನೋಜನು ತೋಟದಿಂದ ೫ ಕಿಲೋ ದ್ರಾಕ್ಷಿ ತೆಗೆದನು. ಅವನು ಅರ್ಧ ಕಿಲೋ ದ್ರಾಕ್ಷಿಯ ೩ ಪೆಟ್ಟಿಗೆ, ಕಾಲು ಕಿಲೋ ದ್ರಾಕ್ಷಿಯ ೨ ಪೆಟ್ಟಿಗೆ, ಹಾಗೂ ಉಳಿದ ದ್ರಾಕ್ಷಿಗಳನ್ನು ಒಂದು ಕಿಲೋದ ಕೆಲವು ಪೆಟ್ಟಿಗೆ ತುಂಬಿದನು. ಹಾಗಾದರೆ ಅವನು ಒಂದು ಕಿಲೋ ದ್ರಾಕ್ಷಿಯ ಎಷ್ಟು ಪೆಟ್ಟಿಗೆ ತುಂಬಿದನು ?

(1) ೧ (2) ೩

(3) ೨ (4) ೫

**74.** ಸ್ವರಾಳು ಗಣಿತ ಪ್ರಾವಿಣ್ಯ ಪರೀಕ್ಷೆಯ ೨ ಪುಸ್ತಕಗಳನ್ನು ಪ್ರತಿಯೊಂದಕ್ಕೆ ೧೭೫ ರೂಪಾಯಿಗಳಂತೆ ಕೊಂಡಳು ಅಂಗಡಿಯವನಿಗೆ ಅವಳು ೫೦೦ ರೂಪಾಯಿಯ ನೋಟು ಕೊಟ್ಟಳು ಅಂಗಡಿಯವನು ಅವಳಿಗೆ ೫೦ ರೂಪಾಯಿಯ ಕೆಲವು ನೋಟನ್ನು ಮರಳಿಕೊಟ್ಟನು. ಹಾಗಾದರೆ ಅಂಗಡಿಕಾರನು ಅವಳಿಗೆ ೫೦ ರೂಪಾಯಿಯ ಎಷ್ಟು ನೋಟನ್ನು ಮರಳಿ ಕೊಟ್ಟನು ?

(1) ೩ (2) ೧೫

(3) ೩೦ (4) ೨

**75.** ದಂಡಗೋಲದ ಅಂಚುಗಳ ಸಂಖ್ಯೆಯು ಮೂಲೆಯ ಸಂಖ್ಯೆಗಿಂತ __________ ಇರುತ್ತದೆ.

(1) ೨ ರಿಂದ ಕಡಿಮೆ (2) ೧ ರಿಂದ ಕಡಿಮೆ

(3) ೨ ರಿಂದ ಹೆಚ್ಚು (4) ೧ ರಿಂದ ಹೆಚ್ಚು

**ಕೇವಲ ಕಚ್ಚಾ ಕೆಲಸಕ್ಕಾಗಿ**

**ಕೇವಲ ಕಚ್ಚಾ ಕೆಲಸಕ್ಕಾಗಿ**